# ಸಾಮಾಜಿಕ ಪರಿವರ್ತನೆಗೆ ಶ್ರೀ ಬಸವೇಶ್ವರ ಮತ್ತು ಮಹಾತ್ಮ ಜ್ಯೋತಿಬಾಪುಲೆರವರ ಕೊಡುಗೆಗಳು

**ಶ್ರೀಧರ ಸಿ. ಕಾಂಬಳೆ**

ಇತಿಹಾಸ ಸಹ ಪ್ರಾಧ್ಯಾಪಕರು, ಜಿ.ಪಿ.ಪೋರವಾಲ ಕಲಾ, ವಾಣಿಜ್ಯ ಹಾಗೂ ವ್ಹಿ.ವ್ಹಿ. ಸಾಲಿಮಠ ವಿಜ್ಞಾನ ಮಹಾವಿದ್ಯಾಲಯ, ಸಿಂದಗಿ.

DOI: https://doi.org/10.5281/zenodo.17296881

## ABSTRACT:

ಭಾರತದ ಸಮಾಜೋ-ಧಾರ್ಮಿಕ ಇತಿಹಾಸದಲ್ಲಿ ಬಸವೇಶ್ವರ, ಜ್ಯೋತಿಬಾ ಫುಲೆ, ಅಂಬೇಡ್ಕರ್ ಅವರ ಚಿಂತನೆಗಳಿಗೆ, ಅವರದೇ ಆದ ಮಹತ್ವವಿರುವುದು ನಾವೆಲ್ಲ ಬಲ್ಲೆವು. ಸನಾತನರ ಬುಡಕ್ಕೆ ನಡುಕ ಹುಟ್ಟಿಸಿದ ಬುದ್ಧ-ಬಸವಾದಿ ಶರಣರ ಈ ಎರಡು ಚಿಂತನ ಧಾರೆಗಳು ನಾಡಿನಗಲಕ್ಕೂ ಶೋಷಿತರ ಬಾಳಿಗೆ ಬೆಳಕು ನೀಡುವಲ್ಲಿ ಇಂದಿಗೂ ಹೆಣಗಾಡುತ್ತಲೇ ಇವೆ.

ಧಾರ್ಮಿಕ-ಸಾಮಾಜಿಕ ನೆಲೆಯ ಮಹಾನ್ ಸಾಧಕರ ಚಿಂತನೆಗಳನ್ನು ಮಡಿವಂತರು ಕಾಲ ಸಂದರ್ಭದಲ್ಲಿ ಅಡಗಿಸುತ್ತಾ ಬಂದಿರುವ ಅನೇಕ ಉದಾಹಣೆಗಳನ್ನು ನಾವು ಪಟ್ಟಿ ಮಾಡುತ್ತಾ ಹೋದರೆ ಚರಿತ್ರೆ ನಮಗೆ ದಾಖಲೆಯನ್ನು ಒದಗಿಸುತ್ತದೆ. ಹೊಲಗೇರಿಯನ್ನು ಶಿವಾಲಯ ಎಂದು ಕರೆದ ಬಸವಣ್ಣ ಅಸ್ಪೃಶ್ಯರಲ್ಲಿದ್ದ ಕೀಳು ಭಾವನೆಯನ್ನು ದೂರ ಮಾಡಿದ. "ಇವನಾರವ ಇವನಾರವ ಎಂದೆನಿಸದಿರಯ್ಯ ಇವ ನಮ್ಮವ ಎಂದೆನಿಸಯ್ಯ" ಎಂದು ಹೇಳುತ್ತಲೇ ಜಾತಿಯನ್ನು ಮೈಮನದಲ್ಲಿ ತುಂಬಿಕೊಂಡವರಿಗೆ ತನ್ನ ಅಂತಃಕರಣದಿಂದಲೇ ಸಮಾನತೆಯ ಔನ್ನತ್ಯವನ್ನು ಪ್ರತಿಪಾದಿಸಿದ ಬುದ್ಧ, ಬಸವ, ಫುಲೆ, ಅಂಬೇಡ್ಕರ್ ಇವರನ್ನು ನೆನೆಯುವುದೇ ಒಂದು ಭಾಗ್ಯ. ಅದರಲ್ಲೂ ಅವರು ಮಾಡಿದ ಸಾಧನೆಗಳನ್ನು ಮನನ ಮಾಡಿಕೊಳ್ಳುವುದೆಂದರೆ ಅದೊಂದು ಪರಮಾನಂದದ ಕೆಲಸ. ಅಂತಹ ಆದರ್ಶ ಜೀವಿಗಳು ಜನತೆಗೆ, ನಾಡಿಗೆ, ದೇಶಕ್ಕೆ ದೊಡ್ಡ ಮಾದರಿಯಾಗಿದ್ದಾರೆ.

## KEYWORDS:

ವಚನಗಳು, ಜಾತಿ, ಕಾಯಕ, ಸಮಾನತೆ, ಮೌಢ್ಯತೆ

**ಪೀಠಿಕೆ**

ಬಸವಣ್ಣನವರು ಹುಟ್ಟಿದ್ದು ಬ್ರಾಹ್ಮಣ ಮನೆತನದಲ್ಲಿ. ಅವರ ತಂದೆ ಮಾದಿರಾಜ (ಮಾದರಸ), ತಾಯಿಯ ಹೆಸರು ಮಾದಲಾಂಬಿಕೆ. ಚಿಕ್ಕಂದಿನಿಂದಲೂ ಸಂಪ್ರದಾಯದ ಗೊಡ್ಡು ಆಚರಣೆ, ವೈದಿಕ ವ್ರತದ ಕಂದಾಚಾರಗಳನ್ನು ವಿರೋಧಿಸುತ್ತಿದ್ದರು. ತನ್ನ ಇಷ್ಟದೈವದ ಕೃಪೆಯಿಂದ ಬ್ರಾಹ್ಮಣ್ಯವನ್ನು ಕೈಬಿಟ್ಟು ಹೊಸ ಧರ್ಮವನ್ನು ಕೈಗೊಂಡರು.

ಶ್ರೀ ಬಸವೇಶ್ವರರು ಒಬ್ಬ ಸಮಾಜ ಸುಧಾರಕರು, ಧರ್ಮ ಸುಧಾರಕರು, ವೈಚಾರಿಕ ಕ್ರಾಂತಿಯ ಹರಿಕಾರ ಮತ್ತು ಶೋಷಣೆಯ ವಿರುದ್ಧ ಸೆಟೆದು ನಿಂತ ಒಬ್ಬ ಮಹಾನುಭಾವ. ಹನ್ನೆರಡನೇ ಶತಮಾನದಲ್ಲಿ ವೀರಶೈವ ಕ್ರಾಂತಿಯ ತೀವ್ರತೆ ಎಷ್ಟಿತ್ತೆಂದರೆ ಯಾರೊಬ್ಬನು ಈ ಮಹಾಪೂರದ ವಿರುದ್ಧ ಎದೆಕೊಟ್ಟು ನಿಂತರೆ ಕೊಚ್ಚಿಕೊಂಡು ಹೋಗುವಷ್ಟು ತೀವ್ರತೆಯನ್ನು ಪಡೆದುಕೊಂಡಿತು. ಆದರೆ ಈ ಕ್ರಾಂತಿ ಬಸವೇಶ್ವರರ ಕಾಲಕಷ್ಟೇ ಸೀಮಿತಗೊಂಡಿತಷ್ಟೆ. ಅದರ ತೀವ್ರತೆ ನಂತರದಲ್ಲಿ ಅಷ್ಟು ಬಲಿಷ್ಠತೆಯನ್ನು ಪಡೆಯಲಿಲ್ಲವೆಂದು ಹೇಳಬಹುದು. ಒಬ್ಬ

ಸಮಾಜ ಸುಧಾರಕನಾದ ಬಸವಣ್ಣನವರ ನಡೆ-ನುಡಿ, ಆಚಾರ-ವಿಚಾರ, ಬರಹ-ಬದುಕು ಇವು ಒಂದೇ ಮರದ ಟೊಂಗೆಯಂತೆ ಅವರಲ್ಲಿ ಬೆಳೆದು ಬಂದವು. ಭಾರತೀಯ ಸಾಮಾಜಿಕ ವ್ಯವಸ್ಥೆಯ ಮೇಲೆ ಅವರಿಗೆ ಸಿಟ್ಟಿದೆ. ಇಲ್ಲಿರುವ ಆಚಾರ, ಮೂಢನಂಬಿಕೆ, ಅಂಧಶ್ರದ್ಧೆ, ಮೌಢ್ಯತೆಗೆ ಮರುಗಿದ್ದಾರೆ. ನಮ್ಮ ಸಮಾಜದ ಕತ್ತಲೆಯನ್ನು ಹೊಡೆದೋಡಿಸಲು ಶ್ರಮಿಸಿದ್ದಾರೆ. ಉತ್ತಮ ಕುಲದಲ್ಲಿ ಹುಟ್ಟಿದವನು ಮಾತ್ರ ಶ್ರೇಷ್ಠ ಕಾಯಕ ಮಾಡಬಲ್ಲ ಮತ್ತು ದೊಡ್ಡ ಸಾಧಕನಾಗಬಲ್ಲ ಎನ್ನುವಂತಹ ಸ್ಥಾಪಿತ ವಿಚಾರಗಳನ್ನು ಅಲ್ಲಗಳೆದು ಕುಲದ ಮೂಲಕ ಸಮಾಜದಲ್ಲಿ ನಡೆಯುತ್ತಿದ್ದ ಶೋಷಣೆಯನ್ನು ನಿವಾರಿಸಿ ಜನರಲ್ಲಿ ಜಾಗೃತಿಯ ಕಿಡಿ ಹೊತ್ತಿಸಲು ಹೆಣಗಿದರು.

**ಬಸವಣ್ಣ (1134-1196)**

ಬಸವಣ್ಣನವರು ಢಾಂಬಿಕತೆಯನ್ನು ಹೊಡೆದೋಡಿಸಿ ಸರಳತೆಯನ್ನು ತರುವ, ಮೌಢ್ಯತೆಯನ್ನು ಕಿತ್ತೊಗೆದು ಸಹಜತೆಯನ್ನು ಮೂಡಿಸುವ, ಭಯಭೀತಿಗಳನ್ನು ತೊರೆದು ಮುಕ್ತ ವಾತಾವರಣವನ್ನುಂಟು ಮಾಡುವ, ಸ್ವಾರ್ಥ-ಸಣ್ಣತನಗಳನ್ನು ತೊರೆದು ಮಾನವೀಯತೆಯನ್ನು ಕಲಿಸುವ ಅವರ ವಿಚಾರಗಳು ವಿಡಂಬನಾತ್ಮಕವಾಗಿ ಬಂದಾಗಲೇ ಹೆಚ್ಚಿನ ಪರಿಣಾಮವನ್ನುಂಟು ಮಾಡುತ್ತವೆ. ಸಮಾಜ ಸುಧಾರಣೆಯ ಉತ್ಕಟೇಚ್ಛೆ ಹೆಚ್ಚಾಗಿರುವುದರಿಂದ ಬಹುಪಾಲು ವಚನಗಳು ಸಮಾಜದ ಲೋಪದೋಷಗಳನ್ನು ಕುರಿತು, ಸ್ಥಗಿತ ಮೌಲ್ಯಗಳನ್ನು ಕುರಿತು ವಿಡಂಬಿಸುತ್ತವೆ.

ವೃತ್ತಿಯಾಧರಿಸಿ ವಿಂಗಡಿಸಲ್ಪಟ್ಟ ಸ್ತರವು ಮುಂದೆ ಜಾತಿಯಾಗಿ ಮಾರ್ಪಾಡುಗೊಂಡಿದ್ದು, ಹಿಂದೂ ಧರ್ಮದ ದೊಡ್ಡ ದುರಂತವೆಂದೇ ಹೇಳಬಹುದು. ಅಂದಿನ ಬ್ರಾಹ್ಮಣ್ಯ ಯುಗ ಅಂದರೆ ತಮ್ಮ ಸ್ವಾರ್ಥ ಸಾಧನೆಗಾಗಿ ಜನರ ಮೇಲೆ ಧರ್ಮದ ಹೆಸರಿನಲ್ಲಿ ಭಾರ ಹಾಕುತ್ತಿದ್ದ ಬ್ರಾಹ್ಮಣರ ಮೇಲೆ ಬಸವೇಶ್ವರರು ಬಾಣಗಳ ಮಹಾಪೂರವನ್ನೇ ಹರಿಸಿದ್ದಾರೆ. ಸಕಲಕ್ಕೂ ಬ್ರಾಹ್ಮಣನೇ ದೇವರೆಂದು ಭಾವಿಸಿದ್ದರಿಂದ ಗೌತಮ ಮುನಿಗೆ ಗೋವಧೆ ಮಾಡಿದ ದೋಷಬಂತು, ಬಲಿ ಚಕ್ರವರ್ತಿಗೆ ಪಾತಾಳ ಬಂಧನವಾಯಿತು, ಕರ್ಣನು ತನ್ನ ಕರ್ಣಕುಂಡಲಗಳನ್ನೇ ಕಳೆದುಕೊಂಡ, ದಕ್ಷನು ತನ್ನ ತಲೆಯನ್ನು ಕಳೆದುಕೊಂಡ, ಪರಶುರಾಮ ಸಮುದ್ರದಲ್ಲಿ ಅಂತರ್ಗತನಾದರೆ, ನಾಗಾರ್ಜುನನು ಮೃತ್ಯುವಶನಾದ ಎಂದು ಉದಾಹರಿಸುತ್ತ, ಬ್ರಾಹ್ಮಣ ದೇವನಾಗಿದ್ದರೆ ಹೀಗೇಕಾಗುತ್ತಿತ್ತಾ, ಎಂದು ಚಾಟಿ ಏಟು ಕೊಡುತ್ತಾರೆ. "ಹೋಮವೆಂದು ಹೋತನ ತಿಂಬ ಅನಾಮಿಕ ಹರರ ಗೋಣಕೊಯ್ದನೆಂದು ಮಂತ್ರವನೋದುವ ನೇಣುಗಾರ ಇವರ ನಡೆ ಒಂದು ಪರಿ, ಶಾಸ್ತ್ರಕ್ಕೊಂದು ಬಟ್ಟೆ, ತನಗೊಂದು ಬಟ್ಟೆ" ಎನ್ನುತ್ತಾ ಆ ದಿನದ ಬ್ರಾಹ್ಮಣ ಕ್ರೌರ್ಯ, ಕಪಟತೆ, ದುರಾಶೆಗಳನ್ನು ಕುಂಬಾರನ ಕುಲುಮೆಯಲ್ಲಿ ಸುಟ್ಟು ಹಾಕಲು ಪ್ರಯತ್ನಿಸಿದ್ದಾರೆ.

ಅಸ್ಪೃಶ್ಯರು ಅನಾದಿ ಕಾಲದಿಂದಲೂ ವೈದಿಕ ಧರ್ಮದ ಪ್ರಭಾವದಲ್ಲಿ ಬಹು ಜನರಾಗಿದ್ದ ದಲಿತರು, ಶೂದ್ರರು, ಮಹಿಳೆಯರು ಶೋಷಣೆಗೊಂಡು ಸಂಪೂರ್ಣ ಶಕ್ತಿಹೀನರಾಗಿದ್ದರು. ಅದರಲ್ಲೂ ಅಸ್ಪೃಶ್ಯರ ಪಾಡಂತು ನಾಯಿಗಿಂತಲೂ ಕೀಳಾಗಿ ಬದುಕುವಂತಾಗಿದ್ದ ಅಂದಿನ ದಿನಮಾನಗಳಲ್ಲಿ ಅವರ ಚೈತನ್ಯಕ್ಕೂ ಒಂದು ಸ್ಪರ್ಶ ಬೇಕಿದ್ದಿತು. ಅದು ಬಸವಣ್ಣನಂಥವರು ದೊರೆತದ್ದು ಆ ಕಾಲದ ಸಾಮಾಜಿಕ ವ್ಯವಸ್ಥೆಯ ಸುದೈವವೆಂದೇ ಹೇಳಬಹುದು. ಇವರಿಗೆಲ್ಲ ಸಮನಾದ ಬದುಕು ಸಿಗಬೇಕಾದರೆ, ಶೋಷಣೆ ನಿಲ್ಲಬೇಕಾದರೆ ವೈದಿಕ ಧರ್ಮಕ್ಕೆ ಅಗ್ನಿ ಸ್ಪರ್ಶ ಮಾಡುವುದು ಆವಶ್ಯವಿತ್ತು. ಅದರಲ್ಲಿದ್ದ ಗೊಡ್ಡು ನಂಬಿಕೆ,

ಕ್ಷುಲ್ಲಕತನಗಳ ವಿರುದ್ಧ ಹೋರಾಡುವುದು ಅವರ ಮುಖ್ಯ ಧ್ಯೇಯವಾಗಿತ್ತು. ಸಾಮಾಜಿಕ–ಸಾಂಸ್ಕೃತಿಕ ಶೋಷಣೆಯನ್ನು ತೊಡೆದು ಹಾಕಲು ವೈದಿಕ ಧರ್ಮದ ವಿರುದ್ಧ ಬಂಡೆದ್ದರು. ವರ್ಣಾಶ್ರಮ ಧರ್ಮ ತಿರಸ್ಕರಿಸಿ, ವೇದ–ಉಪನಿಷತ್ತು–ಆಗಮಗಳನ್ನು ದೂರಸರಿಸಿದ್ದು ದಲಿತರ (ಬಹುಜನರ) ಬದುಕಿಗಾಗಿ ನಡೆಸಿದ ಉಗ್ರ ಹೋರಾಟವಾಗಿದೆ. ಅವರಿಗೆ ದಲಿತರ ಬಗೆಗೆ ಎಂತಹ ಗೌರವವಿತ್ತೆಂದರೆ, ಅವರು ಶೂದ್ರರು, ಮಹಿಳೆಯರಿಗಿಂತ ದಲಿತರಿಗೆ ಅಗ್ರಸ್ಥಾನ ಕೊಟ್ಟಿದ್ದಾರೆ. ಶತ ಶತಮಾನಗಳಿಂದ, ಈ ದೇಶದ ಕಳಂಕವಾಗಿ ಬಂದ ಅಸ್ಪೃಶ್ಯತೆಯ ವಿರುದ್ಧ ಅವರ ತೀವ್ರ ಹೋರಾಟ ಇದಾಗಿದೆ. ನಿಜವಾದ ಅರ್ಥದಲ್ಲಿ ಹೇಳಬೇಕೆಂದರೆ, ಹನ್ನೆರಡನೆಯ ಶತಮಾನದ ಶರಣ ಚಳವಳಿಯು ದಲಿತ ಚಳವಳಿಯಾಗಿದೆ, ಬಹುಜನ ಚಳವಳಿಯಾಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಚಳವಳಿಯ ಕುರಿತು ಹೇಳುವಾಗ ಡಾ॥ ಸಿದ್ದಲಿಂಗಯ್ಯನವರು, "ದಲಿತರನ್ನು ಸಂಘಟನೆ ಮಾಡಿದ ಬಸವಣ್ಣ, ಅವರನ್ನು ಪಟ್ಟಭದ್ರರ ವಿರುದ್ಧ ಹೋರಾಟಕ್ಕೆ ಸಿದ್ಧಗೊಳಿಸಿದ. ಇಲ್ಲಿ ಭಾಗವಹಿಸಿದ ಜನ, ಅವರು ಪ್ರತಿಷ್ಠಾಪನೆ ಮಾಡಿದ ಮೌಲ್ಯಗಳು, ಅವರು ಶತ್ರುಗಳೆಂದು ಪರಿಗಣಿಸಿದ ವ್ಯಕ್ತಿಗಳನ್ನು ಗಮನಿಸಿದರೆ ವಚನ ಚಳವಳಿ ಮೊದಲ ದಲಿತ ಚಳವಳಿ ಎಂಬ ಅರಿವಾಗುತ್ತದೆ".

ಬಸವಣ್ಣನವರ ವಿಚಾರ ಸಾಮಾಜಿಕ ಪ್ರಜ್ಞೆಯ ನೆಲೆಗಟ್ಟಿನ ಮೇಲೆ ನಿಂತಿದ್ದು ಅವರ ವಚನಗಳ ಅಧ್ಯಯನದಿಂದಲೇ ಸ್ಪಷ್ಟವಾಗುತ್ತದೆ. ಸಮಾಜದಲ್ಲಿಯ ಧರ್ಮ ಮಾನವೀಯ ಧರ್ಮವಾಗಬೇಕು, ಆ ಮೂಲಕ ಸಾಮಾಜಿಕ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು ಎನ್ನುವ ಬಸವೇಶ್ವರರು ಅದನ್ನು ಸ್ವತಃ ತಾವೇ ಸಾಧಿಸಿ ತೋರಿಸಿದರು. ಅವರ ಸಮಕಾಲೀನ ಸಾಮಾಜಿಕ ಸ್ಥಿತಿ, ಅಲ್ಲಿಯ ಜಾತಿ ವ್ಯವಸ್ಥೆ–ಅಸ್ಪೃಶ್ಯತೆ ಇವೆಲ್ಲ ಅವರ ವಚನಗಳ ಮೂಲಕವೇ ವ್ಯಕ್ತವಾಗಿವೆ, ಆ ಮೂಲಕ ಸಮಾಜದ ಎಲ್ಲ ಮುಖಗಳನ್ನು ಅತ್ಯಂತ ಹತ್ತಿರದಿಂದ ಕಂಡು ಸೂಕ್ಷ್ಮ ದೃಷ್ಟಿ ಹರಿಸಿ ಅದಕ್ಕೆ ತಕ್ಕಂತೆ ಪ್ರತಿಕ್ರಿಯಿಸಿದ್ದಾರೆ. ವರ್ಣಾಶ್ರಮ ವ್ಯವಸ್ಥೆಯನ್ನು ಧಿಕ್ಕರಿಸುವುದರ ಮೂಲಕ ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿಯ ಧಾರ್ಮಿಕ ಭಾವನೆಯನ್ನು ಶುಚಿಗೊಳಿಸಿ, ಅಸ್ಪೃಶ್ಯತೆ ಆಚರಣೆ ಶಿಕ್ಷೆ ಎಂದು ಹೇಳಲು ಪ್ರತಿಲೋಮ ವಿವಾಹ ಮಾಡಿಸಿದ್ದು, ಕಾಯಕ ತತ್ವದ ಮೂಲಕ ಆರ್ಥಿಕ ಸಮಾನತೆ ಸಾಧಿಸಿ ಬ್ರಾಹ್ಮಣರ ಪೌರೋಹಿತ್ಯಕ್ಕೇ ಪ್ರತಿಯಾಗಿ ದೇಹದಂಡನೆಗೆ ಹೆಚ್ಚು ಒತ್ತು ನೀಡಿ ಆರ್ಥಿಕ ವಿಚಾರಗಳನ್ನು ಮಂಡಿಸಿ ಸಮಾಜೋದ್ಧಾರಕ್ಕೆ ನಾಂದಿ ಹಾಡಿದ ಬಸವಣ್ಣ, ದಾಸೋಹ ಸಂಸ್ಕೃತಿ ಮೂಲಕ ಉಚ್ಚ–ನೀಚ ಎಂಬ ಭಾವನೆಗಳನ್ನು ನಿವಾರಿಸಿದ್ದು, ಮಹಿಳೆಗೆ ಆರ್ಥಿಕ–ವೈಚಾರಿಕತೆ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಸ್ವಾತಂತ್ರ್ಯ ಕಲ್ಪಿಸಿಕೊಟ್ಟದ್ದು, ಅನುಭವ ಮಂಟಪದ ಮೂಲಕ ಸರ್ವರಿಗೂ ವಾಕ್ ಸ್ವಾತಂತ್ರ್ಯ ನೀಡಿದ್ದು, ಶತ ಶತಮಾನಗಳಿಂದಲೂ ಮೌನವಾಗಿದ್ದವರು ಮುಖವೆತ್ತಿ ನಿಂತದ್ದು, ಇಹದ ಮೂಲಕವೇ ಪರವನ್ನು ಗುರುತಿಸುತ್ತ ಭಾರತೀಯ ಕೌಟುಂಬಿಕ ಪರಂಪರೆಗೆ ಮನ್ನಣೆ ನೀಡಿದ್ದು, ಡಾಂಭಿಕತೆಯನ್ನು ವಿಡಂಬಿಸುತ್ತಲೇ ಸರಳತೆಯನ್ನು ತಂದದ್ದು, ಅಂತಸ್ತನ್ನು ಅಲ್ಲಗಳೆಯುತ್ತಲೇ ಸಮಾನತೆ ತಂದದ್ದು, ಜಾತಿ–ಕುಲಗಳನ್ನು ಅಲ್ಲಗಳೆದು ದಯೆಯೇ ಧರ್ಮದ ಮೂಲವೆಂದದ್ದು, ಜನಪದ ಸಂಸ್ಕೃತಿಯನ್ನು ಹುಟ್ಟುಹಾಕಿದ್ದು, ಮೊದಲಾದವುಗಳೆಲ್ಲ ಬಸವೇಶ್ವರರು ತಮ್ಮ ವಚನ ಚಳವಳಿಯ ಮೂಲಕ ಸಾಧಿಸಿದ ಸಾಧನೆಗಳು. ಅಂದಿನ ಸಾಂಪ್ರದಾಯಿಕ ಸಾಮಾಜಿಕ ವ್ಯವಸ್ಥೆಯನ್ನು ತೊಡೆದು ಹಾಕಿ ಹೊಸ ಮುಕ್ತ ಸಮಾಜಕ್ಕೆ ಬುನಾದಿ ಕಲ್ಪಿಸಿದ ಶ್ರೇಯಸ್ಸು ಬಸವಣ್ಣನವರದು.

ದಲಿತ–ಅಸ್ಪೃಶ್ಯರ ಏಳಿಗೆಯೇ ಬಸವೇಶ್ವರರ ವೈಚಾರಿಕತೆಯ ತಿರುಳಾಗಿದ್ದಿತು. ಅವರು ಮಾನಸಿಕವಾಗಿ ದಲಿತರಾಗಿಯೂ ಕೂಡ ಅವರ ಬಾಳಿಗೆ ಬೆಳಕನ್ನು ನೀಡಲು

ಉದಯಿಸಿದರು. ಜಾತಿಪದ್ಧತಿ ಮತ್ತು ವರ್ಣಾಶ್ರಮಧರ್ಮ, ಅಸ್ಪೃಶ್ಯತೆಯನ್ನು ಒಟ್ಟಿಗೆ ವಿರೋಧಿಸುವ ಧೈರ್ಯವನ್ನು ಪ್ರಕಟಿಸಿದರು. ಯಾಕೆಂದರೆ ಅವರಿಗೆ ಯಾರ ಹಂಗೂ ಇರಲಿಲ್ಲ.

ಬಸವಣ್ಣನವರ ಬದುಕಿನ ಮುಖ್ಯ ಗುರಿ ಸಮಾಜದ ಉದ್ಧಾರವೇ ಆಗಿದೆ. ಅವರು ಸಮಾಜಕ್ಕೆ ತೋರಿಸಿದಷ್ಟು ಪ್ರೀತಿಯನ್ನು ದೇವರಿಗೆ ತೋರಿಸಲಿಲ್ಲ. ಬಸವರ ಪೂರ್ವದಲ್ಲಿ ಕಾಣಿಸಿಕೊಂಡ ಎಲ್ಲ ದೇವರು ಕಥಾನಾಯಕನಾಗಿ ನಡೆಸಿದವರೇ, ಅದು ದ್ವೈತ, ಅದ್ವೈತ, ಮತ್ತು ಭಕ್ತಿ ಧರ್ಮ ವರ್ತಕರ ಕೈಯಲ್ಲಿ. ಆದರೆ ಬಸವೇಶ್ವರರು ಸಮಾಜೋದ್ಧಾರದ ಗುರಿ ಹೊಂದಿದ್ದರು. ಅದಕ್ಕಾಗಿ ತಮ್ಮನ್ನೇ ಅರ್ಪಿಸಿಕೊಂಡರು. ಅದಕ್ಕಾಗಿಯೇ ಸಾಮಾಜಿಕ ಕ್ರಾಂತಿಯ ದ್ಯೋತಕವಾಗಿ ಶೋಷಣೆ ಮುಕ್ತ ಸಮಾಜದ ಪರಿಕಲ್ಪನೆ ಮತ್ತು ಮಾನವನ ಸ್ವಾತಂತ್ರ್ಯ-ಸಮಾನತೆಯ ಪರಿಕಲ್ಪನೆಯನ್ನು ಕೊಡುಗೆಯಾಗಿ ನೀಡಿದ ಶ್ರೇಯಸ್ಸು ಬಸವಣ್ಣನವರದು.

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ಜಾತಿ ವ್ಯವಸ್ಥೆಯು ನಮ್ಮ ಸಾಮಾಜಿಕ ಜೀವನಕ್ಕೆ ಅಂಟುರೋಗವಾಗಿ ಪರಿಣಮಿಸಿತು. ಪುರೋಹಿತಶಾಹಿ ಸ್ವಾರ್ಥಕ್ಕೆ ಬಲಿಯಾದ ಭಾರತೀಯ ಸಮಾಜ ಸಂಪೂರ್ಣ ಕೊಳೆತು ಹೋಗಿತ್ತು. ಶೂದ್ರರು, ಸ್ತ್ರೀಯರು ಈ ವ್ಯವಸ್ಥೆಯಲ್ಲಿ ಸಂಪೂರ್ಣವಾಗಿ ನಲುಗಿ ಹೋಗಿದ್ದರು. ಇತಿಹಾಸ ಮಲಗಿದರೆ ಮಲಗುತ್ತದೆ, ಬಡಿದೆಬ್ಬಿಸಿದರೆ ಎಂತಹ ತಡೆಗೋಡೆಯನ್ನು ಮೀರಿ ನಿಲ್ಲಬಹುದು ಎಂಬುದಕ್ಕೆ ಸಾಕಷ್ಟು ಐತಿಹಾಸಿಕ ಘಟನೆಗಳು ಸಿಗುತ್ತವೆ. ಮಲಗಿದ ಅಸ್ಪೃಶ್ಯರಿಗೆ ಏಳಲು ಶಕ್ತಿ ನೀಡಿದವರು ಮತ್ತು ವೈದಿಕರ ಚರಿತ್ರೆಯನ್ನು ಜಾಲಾಡಿದವರು ಬಸವೇಶ್ವರರು. ಪ್ರಾಚೀನ ಕಾಲದಲ್ಲಿ ವೃತ್ತಿಗಳು ಕ್ರಮಣ ಜಾತಿಗಳಾಗಿ ಪರಿಣಮಿಸಿದವು. ಶೂದ್ರರು ಮೇಲಿನ ಜಾತಿಯ ಸೇವೆ ಮಾಡಿ ಬದುಕುವಂತಾಯಿತು. ಕ್ರಮೇಣ ಈ ಪರಿಸ್ಥಿತಿ ಇನ್ನೂ ಕಠಿಣವಾಯಿತು. ಜಾತಿಯು ಹುಟ್ಟಿನ ಮೇಲೆ ನಿರ್ಧಾರವಾಗ ತೊಡಗಿತು. ಬ್ರಾಹ್ಮಣ ತಾನೇ ಶ್ರೇಷ್ಠ, ಉಳಿದವರು ಕನಿಷ್ಠರೆಂದು ಸ್ವಯಂ ಘೋಷಿಸಿಕೊಂಡನು. ಅದಕ್ಕೆ ವೇದಗಳ ಕಸಿಯನ್ನು ಕಟ್ಟಿದನು. ಈ ಜಾತಿ ವ್ಯವಸ್ಥೆ ಸಾಮಾಜಿಕ ಜೀವನದಲ್ಲಿ ಬಹುದೊಡ್ಡ ಕಂದರವನ್ನೇ ನಿರ್ಮಿಸಿತು. ಈ ಹಿನ್ನೆಲೆಯಲ್ಲಿಯೇ ಬಸವೇಶ್ವರರು ಸಾಮಾಜಿಕ ಕ್ರಾಂತಿಗೆ ನಾಂದಿಹಾಡಿದರು. ಬಸವೇಶ್ವರರು ಸಾಮಾಜಿಕ ಆಂದೋಲನದ ಹೆಜ್ಜೆಯು ಅಂದಿನ ಶ್ರೇಣೀಕೃತ ಸಮಾಜವನ್ನು ವಿರೋಧಿಸುವ ಮೂಲಕ ಮುನ್ನಡೆಯಿತು. ಒಬ್ಬ ವ್ಯಕ್ತಿಯ ಸಾಧನೆ ಆತನ ಹುಟ್ಟು-ಜಾತಿಯನ್ನು ಅವಲಂಬಿಸಿಲ್ಲ ಎಂದು ಮತ್ತೆ ಮತ್ತೆ ಹೇಳುತ್ತಾ ಅದನ್ನು ಆಚರಣೆಯಲ್ಲಿ ತರಲು ಪ್ರಯತ್ನಿಸಿದರು. ಪ್ರಾಚೀನ ಕಾಲದಲ್ಲಿ ಆರ್ಯರು ದಾಸ ಕನ್ಯೆಯನ್ನು ಹೆಂಡತಿಯನ್ನಾಗಿ ಸ್ವೀಕರಿಸುತ್ತಿದ್ದರು. ಇದರಲ್ಲಿ ವ್ಯತ್ಯಾಸ ಹೆಚ್ಚಾಗುತ್ತಿದ್ದಂತೆಯೇ ಜಾತಿ-ಉಪಜಾತಿಗಳಾಗಿ ಬಂದವು. ಅವರ ವೃತ್ತಿಗಳೂ ಕೂಡಾ ಜಾತಿಯನ್ನೇ ಪ್ರತಿನಿಧಿಸಲಾರಂಭಿಸಿದವು. ಬಸವಾದಿ ಶರಣರು ಇದನ್ನು ಪ್ರತಿಭಟಿಸಿದರು. ಹೀಗೆ ಆರ್ಯ ಸಂಸ್ಕೃತಿಯಲ್ಲಿ ಒಂದೊಂದು ವರ್ಗಗಳು ಹುಟ್ಟಿಕೊಳ್ಳಲಾರಂಭಿಸಿದವು. ಋಗ್ವೇದದಲ್ಲಿ ಉಲ್ಲೇಖಗೊಂಡ ಕೃಷಿಯೊಂದಿಗಿನ ಇತರ ವೃತ್ತಿಗಳೆಂದರೆ ಕಮ್ಮಾರ, ಸ್ವರ್ಣಕಾರ (ಪತ್ತಾರ), ವೈದ್ಯ, ವರ್ಧತ್ಯ, ಚರ್ಮಕಾರ, ತಕ್ಷ, ಮೇದ, ಸೈನಿಕ, ಪುರೋಹಿತ ಮೊದಲಾದವುಗಳು.

ಇವುಗಳು ಕ್ರಮೇಣ ತಮ್ಮ ಪಾವಿತ್ರ್ಯತೆಯನ್ನು ಕಳೆದುಕೊಂಡು ಯಜ್ಞ-ಯಾಗಗಳ ಹೆಸರಿನಲ್ಲಿ ಶೋಷಣೆ-ವಂಚನೆಯ ಗೂಡಾದವು. ಬ್ರಾಹ್ಮಣರೂ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಮೊದಲಾದ ಕ್ಷೇತ್ರಗಳಲ್ಲಿ ಶಿಖರ ಸ್ಥಾನ ಪಡೆದರು. ಇವುಗಳನ್ನೆಲ್ಲಾ ಮೆಟ್ಟಿ

ನಿಲ್ಲುವುದು ಇವರ ಉದ್ದೇಶವಾಗಿತ್ತು.

ಜಾತಿಯನ್ನು ಕುರಿತು ಅದರ ಉಚ್ಚಾಟನೆಯನ್ನು ಕುರಿತು ಬರೀ ಮಾತಿನಿಂದ ಹೇಳಿದರಾಗದು, ಅದನ್ನು ಆಚರಣೆಯಲ್ಲಿಯೂ ತರಬೇಕು. ಅದನ್ನು ಸಾಧಿಸಿ ತೋರಿಸಿದವರು ಬಸವಣ್ಣ. ಇದಕ್ಕೆ ಉತ್ತಮವಾದಂತ ಉದಾಹರಣೆಯೆಂದರೆ, ಮಚ್ಚೆ-ಕಾಯಕದ (ಸಮಗಾರ) ಹರಳಯ್ಯನ ಮಗ ಶೀಲವಂತನಿಗೂ ಮತ್ತು ಮಧುವರಸ ಎಂಬ ಬ್ರಾಹ್ಮಣನ ಮಗಳು ಕಲಾವತಿಗೂ ಬಸವಣ್ಣನವರ ಒಪ್ಪಿಗೆಯ ಮೇರೆಗೆ ಇವರಿಬ್ಬರ ವಿವಾಹವು ನೆರವೇರಿತು. ಮೇಲ್ವರ್ಗದ ಕನ್ಯೆ ಮತ್ತು ಕೆಳವರ್ಗದ ವರನ ಮಧ್ಯೆ ಮದುವೆ ನಡೆದದ್ದನ್ನು ಬಸವಣ್ಣನವರು ಕಣ್ಣಾರೆ ಕಂಡಿದ್ದಾರೆ. ಇದು ಜಾತಿ ವಿನಾಶಕ್ಕೆ ಕೈಗೊಂಡ ಅವರ ಮಹತ್ವದ ಹೆಜ್ಜೆಯಾಗಿತ್ತು.

ಜಗತ್ತಿನಲ್ಲಿ ಹೋರಾಟಗಳು ಇದ್ದವರು ಮತ್ತು ಇಲ್ಲದವರ ಮಧ್ಯೆಯೇ ನಡೆದಿವೆ. ಇಲ್ಲದವರು (ಬಡವರು) ಇದ್ದವರಿಂದ (ಶ್ರೀಮಂತರಿಂದ) ಶೋಷಣೆಗೊಳಗಾಗಿ ಕೊನೆಗೆ ಶ್ರೀಮಂತರ (ಮೇಲ್ವರ್ಗದವರ) ವಿರುದ್ಧದ ಹೋರಾಟಗಳೇ ಇತಿಹಾಸದ ತಿರುಳು. ಅದು ಸತ್ಯವೂ ಹೌದು. ಬಸವಣ್ಣ ಪ್ರತಿಯೊಬ್ಬನೂ ದುಡಿಯಬೇಕು (ಕಾಯಕದಲ್ಲಿ ನಿರತನಾಗಬೇಕು) ಮತ್ತು ತಮ್ಮ ದುಡಿಮೆಯ ಹೆಚ್ಚುವರಿ ಪಾಲನ್ನು ಸಮಾಜಕ್ಕೆ (ದಾಸೋಹಕ್ಕೆ) ಅರ್ಪಿಸಬೇಕು ಎಂದು ಪ್ರತಿಪಾದಿಸಿದರು.

ಇಂದಿನ ಬಹುಜನ ಚಳವಳಿಯ ಮುಖ್ಯ ಉಕ್ತಿಯಾದ 'ಸಮಾಜಕ್ಕೆ ಮರಳಿ ಕೊಡು' ಎಂಬ ಹೇಳಿಕೆಯನ್ನು ಬಸವಣ್ಣನವರು ಹನ್ನೆರಡನೇ ಶತಮಾನದಲ್ಲಿಯೇ ಪ್ರತಿಪಾದಿಸಿದ್ದನ್ನು ನಾವು ಕಾಣುತ್ತೇವೆ.

**ಮಹಾತ್ಮಾ ಜ್ಯೋತಿಬಾ ಫುಲೆ (1827–1890)**

ಹತ್ತೊಂಬತ್ತನೆಯ ಶತಮಾನವು ಸಾಮಾಜಿಕ ಚಳವಳಿಯ ಹಿನ್ನಲೆಯಲ್ಲಿ ಮಹಾರಾಷ್ಟ್ರ ಹಾಗೂ ದೇಶದ ಇತರ ಭಾಗಗಳಲ್ಲಿ ಸಾಮಾಜಿಕ ಸುಧಾರಣೆಯನ್ನು ಕಂಡಿತು. ಬ್ರಾಹ್ಮಣಾಧಾರಿತ ಸಾಮಾಜಿಕ ವ್ಯವಸ್ಥೆಗೆ ವಿರುದ್ಧವಾಗಿ 19ನೆಯ ಶತಮಾನದ ಮಧ್ಯಕಾಲದಲ್ಲಿ ಮಹಾತ್ಮಾ ಜ್ಯೋತಿಬಾ ಫುಲೆಯವರು ಹುಟ್ಟು ಹಾಕಿದ ಚಳವಳಿ ದೇಶವ್ಯಾಪಿ ವಿಸ್ತರಿಸಿತು. ಜ್ಯೋತಿರಾವ್ ಗೋವಿಂದರಾವ್ ಫುಲೆಯವರು ಸಾಮಾಜಿಕ ಸುಧಾರಣೆಯಲ್ಲಿ ಅದ್ವಿತೀಯ ಸ್ಥಾನವನ್ನು ಪಡೆದಿದ್ದಾರೆ. ಬೇರೆ ಸಮಾಜ ಸುಧಾರಕರು ಸಾಮಾಜಿಕ ಸಂಸ್ಥೆಗಳಾದ ಕುಟುಂಬ ಮತ್ತು ವಿವಾಹದಲ್ಲಿ ಅದರಲ್ಲೂ ಮಹಿಳೆಯ ಸ್ಥಾನಮಾನ ಮತ್ತು ಹಕ್ಕುಗಳಲ್ಲಿ ಸುಧಾರಣೆಗಳನ್ನು ತರುವಲ್ಲಿ ತಮ್ಮ ಗಮನವನ್ನು ಕೇಂದ್ರೀಕರಿಸಿದರೆ, ಜ್ಯೋತಿಬಾ ಫುಲೆಯವರು ಶತ ಶತಮಾನಗಳಿಂದ ಶೋಷಣೆಗೆ ಒಳಗಾದ ಬಹುಜನರಿಗಾದ ಅನ್ಯಾಯದ ವಿರುದ್ಧ, ಜಾತಿ ವ್ಯವಸ್ಥೆಯ ವಿರುದ್ಧ ಸಿಡಿದೆದ್ದರು. ಇವರು ಅಸ್ಪೃಶ್ಯರ ಧ್ವನಿಯಾಗಿ ಮತ್ತು ಬಡ ರೈತರ ಬೆನ್ನೆಲುಬಾಗಿ ನಿಂತರು. ಇವರು ಅವರ ಹಕ್ಕುಗಳ ಶೀಘ್ರಮತಿ ಪ್ರತಿಪಾದಕರಾಗಿದ್ದರು. ಅಸ್ಪೃಶ್ಯರ ವಿರುದ್ಧದ ಅನೇಕ ಪ್ರತಿದಾಳಿಗಳಿಗೆ ಎಡೆಬಿಡದೇ ಹೋರಾಡಿದ ಸಂಗ್ರಾಮದ ಕಥೆಯು ಸ್ಫೂರ್ತಿಯ ಕಥೆಯಾಗಿದೆ. ಇಂಥ ಎಲ್ಲ ಒತ್ತಡಗಳಿಗೆ ಒಮ್ಮೆಯೂ ಮಣಿಯದೇ ಅವುಗಳನ್ನು ಎದುರಿಸುವ ಮತ್ತು ತಮ್ಮ ಧ್ಯೆಯಗಳ ಪ್ರಕಾರ ನಡೆದುಕೊಳ್ಳುವ ಇವರ ಸಾಮರ್ಥ್ಯ, ಸಾಮಾಜಿಕ ಕಳಕಳಿಯ ಸೇವೆ ಮತ್ತು ತ್ಯಾಗದ ಬಗ್ಗೆ ಇತ್ತೀಚಿನ ದಶಕಗಳಲ್ಲಿ ಹೆಚ್ಚಾಗಿ ಹೊಗಳಿಕೆಯಾಗುತ್ತಿದೆ.

ಜ್ಯೋತಿಬಾ ಫುಲೆಯವರು 20ನೆಯ ಫೆಬ್ರವರಿ 1827 ರಂದು ಜನಿಸಿದರು. ಅವರ ತಂದೆ ಗೋವಿಂದರಾವ್ ಪುಣೆಯಲ್ಲಿ ತರಕಾರಿ ವ್ಯಾಪಾರ ಮಾಡುತ್ತಿದ್ದರು. ಮೂಲತಃ

ಜ್ಯೋತಿರಾವ್ ಅವರ ಕುಟುಂಬ ‘ಗೋರ್ಹಯ’ ಎಂದು ಕರೆಯಲ್ಪಡುವ ಮಾಲಿ ಜಾತಿಗೆ ಸೇರಿದ್ದು, ಮಹಾರಾಷ್ಟ್ರದ ಸತಾರಾ ಜಿಲ್ಲೆಯ ಕಡ್ಡುನ್ ಹಳ್ಳಿಯಿಂದ ಬಂದವರಾಗಿದ್ದು.

ಜ್ಯೋತಿಯು ಸಮಾಜದ ಅವೈಜ್ಞಾನಿಕ ವಿಂಗಡನೆಯ ವಿರುದ್ಧ ಹೋರಾಡಲು ಮತ್ತು ಅತೀ ಕೆಟ್ಟ ಪದ್ಧತಿ ಹಾಗೂ ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಶೋಷಣೆಯ ವಿರುದ್ಧ ಹೋರಾಡಲು ಸನ್ನದ್ಧನಾದನು. ಜಾತಿ ವ್ಯವಸ್ಥೆಯು ಅತ್ಯಂತ ಬಿಗಿಭದ್ರವಾಗಿತ್ತು. ಏಕೆಂದರೆ ಕೆಳವರ್ಗದ ಜನರಿಗೆ ಶಿಕ್ಷಣವಿರಲಿಲ್ಲ. ಅವರು ಶತ ಶತಮಾನಗಳಿಂದ ಈ ಮಾನಸಿಕ ಗುಲಾಮಗಿರಿಯನ್ನು ಒಪ್ಪಿ ಗೌರವಿಸುತ್ತಿದ್ದರು. ಆದ್ದರಿಂದ ಜ್ಯೋತಿಬಾ “ಶಿಕ್ಷಣವಿಲ್ಲದೇ ಇರುವುದರಿಂದ ಬುದ್ಧಿ ನಾಶವಾಯಿತು. ಬುದ್ಧಿ ಇಲ್ಲದಿರುವುದರಿಂದ ನೈತಿಕತೆ ನಾಶವಾಯಿತು. ನೈತಿಕತೆ ಇಲ್ಲದಿರುವುದರಿಂದ ಕ್ರಿಯಾಶೀಲತೆ ನಾಶವಾಯಿತು. ಕ್ರಿಯಾಶೀಲತೆ ಇಲ್ಲದಿರುವುದರಿಂದ ಸಂಪತ್ತು ನಾಶವಾಯಿತು. ಸಂಪತ್ತು ಇಲ್ಲದಿರುವುದರಿಂದ ಶೂದ್ರರು ನಾಶವಾದರು” ಎಂದು ಹೇಳಿದ ಅವರು ಕೆಳವರ್ಗದ ಜನರಿಗೆ ಶಿಕ್ಷಣ ಕೊಡುವ ಮೂಲಕ ಜಾಗೃತಿ ಮೂಡಿಸಿ ಮಾನಸಿಕ ಗುಲಾಮಗಿರಿಯ ವಿರುದ್ಧ ಸಮರದ ಬಾವುಟ ಹಾರಿಸಲು ಪಣತೊಟ್ಟರು. ಸಾಮಾಜಿಕ ಅಸಮಾನತೆಯ ವಿರುದ್ಧ ಹೋರಾಡಲು ಕೆಳಜಾತಿಯವರನ್ನು ಉದ್ಧಾರ ಮಾಡಲು ಆಲೋಚಿಸಿದರು. ಪ್ರತಿಯೊಂದು ಅಪಜಯದಲ್ಲಿ ಜಯದ ಕಡೆಗೆ ವಾಲುವ ಸ್ಪೂರ್ತಿ ಇದೆ ಎಂದು ಹೇಳಲಾಗುತ್ತದೆ. ತನಗಾದ ಅಗೌರವವನ್ನು ಶಪಿಸುತ್ತಾ ಅಥವಾ ಅದನ್ನು ಸ್ವೀಕರಿಸದೇ ಅದರ ವಿರುದ್ಧ ಹೋರಾಡುವ ಸೆಲೆಯಾಗಿ ಜ್ಯೋತಿಯವರು ಹೊರಹೊಮ್ಮಿದರು.

ಬಹುಜನ ಸಮಾಜದ ಈ ಅನ್ಯಾಯಕ್ಕೆ, ಶೋಷಣೆಗೆ ಮೂಲ ಕಾರಣ ಅವರ ಅನಕ್ಷರತೆ ಎಂದು ಮನಗಂಡ ಜ್ಯೋತಿಬಾರವರು ಮಹಿಳೆ ಮತ್ತು ಕೆಳವರ್ಗದ ಜನರ ಶಿಕ್ಷಣಕ್ಕಾಗಿ ಶ್ರಮಿಸಲಾರಂಭಿಸಿದರು. ಹಾಗೆಯೇ ತಮ್ಮ ಪತ್ನಿ ಸಾವಿತ್ರಿಬಾಯಿಯವರಿಗೆ ಮನೆಯಲ್ಲಿಯೇ ಶಿಕ್ಷಣವನ್ನು ನೀಡಿದರು. ಮತ್ತು ಹೆಣ್ಣು ಮಕ್ಕಳ ಶಾಲೆಯನ್ನು 1848 ರ ಆಗಸ್ಟ್‌ನಲ್ಲಿ ಪ್ರಾರಂಭಿಸಿದರು. ಸಾಂಪ್ರದಾಯಿಕ ವಿರೋಧಿಗಳು ಇದರಿಂದ ಕುಪಿತಗೊಂಡು ಇದಕ್ಕೆ ವಿರೋಧ ವ್ಯಕ್ತಪಡಿಸಿದರು. ಅವರ ದುರಾಲೋಚಿತ ಅಪಪ್ರಚಾರದಿಂದಾಗಿ ಅಸ್ಪೃಶ್ಯರೇ ವಿದ್ಯಾರ್ಥಿಗಳಾದ ಆ ಶಾಲೆಯಲ್ಲಿ ಕೆಲಸ ಮಾಡಲು ಯಾವ ಶಿಕ್ಷಕರೂ ಬರಲಿಲ್ಲ. ಇದಕ್ಕೆ ಪರಿಹಾರವಾಗಿ ತಮ್ಮ ಪತ್ನಿ ಸಾವಿತ್ರಿಬಾಯಿಯನ್ನು ಶಿಕ್ಷಕಿಯನ್ನಾಗಿ ನೇಮಿಸಿಕೊಂಡರು. ಅವರು ಭಾರತದ ಪ್ರಥಮ ಮಹಿಳಾ ಶಿಕ್ಷಕಿಯಾದರು. ಅವರು ಶಾಲೆಗೆ ಹೋಗುವಾಗ–ಬರುವಾಗ ಕಲ್ಲು–ಮಣ್ಣಿನ ಹೆಂಟೆಗಳನ್ನು, ಸೆಗಣಿಯನ್ನು ಮೇಲ್ಜಾತಿಯ ಮಹಿಳೆಯರು ಮತ್ತು ಸಂಪ್ರದಾಯವಾದಿಗಳು ಅವರ ಮೇಲೆ ಎಸೆಯುತ್ತಿದ್ದರು. ಜ್ಯೋತಿರಾವ್ ತಂದೆಯವರಿಗೆ ಮಗನ ಚಟುವಟಿಕೆಯನ್ನು ನಿಲ್ಲಿಸದಿದ್ದರೆ ಕಟ್ಟ ಪರಿಣಾಮ ಕಾದಿದೆ ಮತ್ತು ನಿಮ್ಮ ಕುಟುಂಬಕ್ಕೆ ಬಹಿಷ್ಕಾರ ಹಾಕಲಾಗುವುದಾಗಿ ಬೆದರಿಕೆ ಒಡ್ಡಲಾಯಿತು. ಅವರ ತಂದೆ ಈ ಕೆಲಸವನ್ನು ನಿಲ್ಲಿಸುವಂತೆ ಜ್ಯೋತಿಬಾರನ್ನು ಒತ್ತಾಯಿಸಿದರು. ಅವರ ಮಾತನ್ನು ಜ್ಯೋತಿಬಾರವರು ಕೇಳದಿದ್ದಾಗ ಒತ್ತಾಯದಿಂದ ಜ್ಯೋತಿಬಾರವರ ತಂದೆ, ಮಗ ಮತ್ತು ಸೊಸೆಯನ್ನು ಮನೆಬಿಟ್ಟು ಹೊರಹಾಕಿದರು. ಆದರೆ ಅವರಿಬ್ಬರು ತಮ್ಮ ಧೈಯ ಮತ್ತು ಹೋರಾಟದಿಂದ ಹಿಂದೆ ಸರಿಯಲಿಲ್ಲ.

ಜ್ಯೋತಿಬಾರವರು ಭಾರತದಲ್ಲಿ ಮಹಿಳಾ ಶಿಕ್ಷಣದ ಹರಿಕಾರರು, ಹೆಣ್ಣುಮಕ್ಕಳಿಗೆ ಶಾಲೆ ಪ್ರಾರಂಭಿಸಿದ ಪ್ರಥಮರೂ ಕೂಡ ಆಗಿದ್ದಾರೆ.

ಬ್ರಾಹ್ಮಣ ಹಾಗೂ ಇತರೇ ಮೇಲ್ಜಾತಿಯವರಲ್ಲಿ ವಿಧವಾ ಮರುವಿವಾಹಕ್ಕೆ ನಿಷಿದ್ಧವಾಗಿತ್ತು. ಮತ್ತು ಬಾಲ್ಯವಿವಾಹ ಜಾರಿಯಲ್ಲಿತ್ತು. ಅನೇಕ ವಿಧವೆಯವರು ಅತಿ ಚಿಕ್ಕವಯಸ್ಸಿನವರಿದ್ದು, ಸಾಂಪ್ರದಾಯಿಕ ಜನರು ಬಯಸಿದಂತೆ ಜೀವನ ಸಾಗಿಸುತ್ತಿದ್ದರು. ಕೆಲವು ವಿಧವೆಯರು ಅನೈತಿಕ ಸಂಬಂಧದಿಂದ ಜನಿಸಿದ ಮಕ್ಕಳನ್ನು ಗರ್ಭಪಾತ ಮಾಡಿಸಿಕೊಳ್ಳುತ್ತಿದ್ದರು. ಇಲ್ಲವೇ ಅವನ್ನು ಅನಾಥರಂತೆ ಬೀದಿಗಳಲ್ಲಿ ಎಸೆಯುತ್ತಿದ್ದರು. ಜ್ಯೋತಿಬಾರವರು ಇಂಥ ಅನಾಥ ಮಕ್ಕಳಿಗಾಗಿ ಅನಾಥಾಲಯವನ್ನು ಸ್ಥಾಪಿಸಿದರು ಮತ್ತು ಹಿಂದೂ ಸಂಪ್ರದಾಯದಲ್ಲಿಯೇ ಇದು ಮೊದಲನೆಯದು. ಇಂಥ ಅನಾಥಾಲಯದಲ್ಲಿ ಒಬ್ಬ ಬ್ರಾಹ್ಮಣ ವಿಧವೆ ಗಂಡುಮಗುವಿಗೆ ಜನ್ಮ ನೀಡಿದರೆ, ಜ್ಯೋತಿಬಾರವರು ಆ ಮಗುವನ್ನು ತಮ್ಮ ಮಗನಾಗಿ ದತ್ತು ಪಡೆದರು.

ಶೂದ್ರಾತಿಶೂದ್ರರು (ಬಹುಜನರು) ಈ ಮಣ್ಣಿನ ಮಕ್ಕಳಾಗಿದ್ದು, ಹೊರಗಿನಿಂದ ಬಂದ ಬ್ರಾಹ್ಮಣರು ಬಡ-ಕೆಳವರ್ಗದವರು ದುಡಿದ ಶ್ರಮದಿಂದ ಬಂದ ಫಲವನ್ನು ಅನುಭವಿಸುತ್ತಿದ್ದಾರೆ ಎಂದು ನಿಜವಾಗಿಯೂ ನಡೆಯುವ ಶೋಷಣೆಯ ನೂರರ ಒಂದು ಭಾಗದಷ್ಟು ಮಾತ್ರ ತಮ್ಮ ಕೃತಿಯಲ್ಲಿ ಬರೆದಿದ್ದಾಗಿ ವಿವರಿಸಿದರು. ಅದೇ ವರ್ಷ ಸತ್ಯಶೋಧಕ ಸಮಾಜವನ್ನು ಸ್ಥಾಪಿಸಿದರು. ಜಾತಿ ಪದ್ಧತಿ ಮತ್ತು ಬ್ರಾಹ್ಮಣವಾದವನ್ನು ಬಹಿರಂಗವಾಗಿ ಪ್ರತಿಭಟಿಸಲಾಯಿತು. ಜ್ಯೋತಿಬಾರವರು ತಮ್ಮ ಶ್ರಮವನ್ನು ಅಸ್ಪೃಶ್ಯರ ಉದ್ದಾರಕ್ಕಾಗಿ ಮುಡಿಪಾಗಿಟ್ಟರು. 1873 ರಿಂದ ಬಹುಜನ ಸಮಾಜವನ್ನು ಸಂಘಟಿಸಲು ಪ್ರಾರಂಭಿಸಿದರು.

**ಸತ್ಯಶೋಧಕ ಸಮಾಜ**

24ನೆಯ ಸೆಪ್ಟೆಂಬರ್, 1873 ರಂದು ತಮ್ಮ ಬೆಂಬಲಿಗರೊಂದಿಗೆ ಸಭೆ ಸೇರಿ ಸತ್ಯಶೋಧಕ ಸಮಾಜವನ್ನು ಸ್ಥಾಪಿಸಲು ನಿರ್ಣಯಿಸಿದರು. ಮಹಾತ್ಮಾ ಜ್ಯೋತಿಬಾ ಫುಲೆಯವರ ಮಹೋನ್ನತ ಕೊಡುಗೆ ಎಂದರೆ ಬಲವಾದ ಕ್ರಾಂತಿಕಾರಿ ಸಾಂಸ್ಕೃತಿಕ ನಿಲುವು ಮತ್ತು ಸಮಾನತೆ ಹಾಗೂ ಜನಸಾಮಾನ್ಯರಲ್ಲಿ ಸಾಮಾಜಿಕ ಹಾಗೂ ಧಾರ್ಮಿಕ ಸುಧಾರಣೆ ತರಲು ಹೋರಾಡುವ ಒಂದು ಸಂಘಟನೆಯಾದ ಸತ್ಯಶೋಧಕ ಸಮಾಜವನ್ನು ಹುಟ್ಟುಹಾಕಿದರು. ಈ ಸಂಘಟನೆಯ ಮುಖ್ಯ ಉದ್ದೇಶವೆಂದರೆ ಶೂದ್ರ ಹಾಗೂ ಅತೀಶೂದ್ರ (ಬಹುಜನರನ್ನು) ಸ್ವತಂತ್ರಗೊಳಿಸುವುದು. ಈ ಸತ್ಯಶೋಧಕ ಸಮಾಜದ ಎಲ್ಲ ಸದಸ್ಯರು, ಎಲ್ಲ ಮನುಷ್ಯರನ್ನು ದೇವರ ಮಕ್ಕಳೆಂದು ನಡೆದುಕೊಳ್ಳುವ ಮತ್ತು ದೇವರನ್ನು ಯಾರ ಮಧ್ಯಸ್ಥಿಕೆ ಇಲ್ಲದೇ ನೇರವಾಗಿ ಪೂಜಿಸುವುದು. ಇಲ್ಲಿ ಎಲ್ಲರಿಗೂ ಸದಸ್ಯತ್ವ ಮುಕ್ತವಾಗಿತ್ತು. ಲಭ್ಯವಿರುವ ಎಲ್ಲ ಸಾಕ್ಷಾಧಾರಗಳ ಪ್ರಕಾರ ಕೆಲವು ಜೀನ್ಸ್ (Jews) ಗಳು ಇದರ ಸದಸ್ಯರಾಗಿದ್ದರು. 1876 ರಲ್ಲಿ 316 ಜನ ಸತ್ಯಶೋಧಕ ಸಮಾಜದಲ್ಲಿದ್ದರು. ಇದಕ್ಕೆ ಸಮಾನಾಂತರವಾಗಿ ಮುಂಬೈನಲ್ಲಿ ದಯಾನಂದ ಸರಸ್ವತಿಯವರಿಂದ ಆರ್ಯ ಸಮಾಜವು ಸ್ಥಾಪಿಸಲ್ಪಟ್ಟಿತ್ತು. 10 ನೆಯ ಏಪ್ರಿಲ್ 1875 ರಂದು ಇದರ ಉದ್ಘಾಟನೆಯಾಯಿತು.

19ನೆಯ ಶತಮಾನದ ಅಂತಿಮ ಭಾಗದಲ್ಲಿ ಯಾವುದೇ ವೈರತ್ವವಿಲ್ಲದೇ ಕೆಳವರ್ಗದವರ ಹಕ್ಕುಗಳಿಗಾಗಿ ಹೋರಾಡುವ ಒಂದು ಸಂಕೇತವಾಗಿ ಹೊರಹೊಮ್ಮಿತು. ಹಿಂದೂ ಧರ್ಮ ಅಥವಾ ಬ್ರಾಹ್ಮಣವಾದ ಹಳೆಯ ಸಂಪ್ರದಾಯವಾದ ವೇದದ ಅಥವಾ ಚಾತುರ್ವರ್ಣ ಪದ್ಧತಿಯನ್ನು ಅಲ್ಲಗಳೆಯುವುದೇ ಸತ್ಯಶೋಧಕ ಸಮಾಜದ ಮುಖ್ಯ ಉದ್ದೇಶವಾಗಿತ್ತು. ಜಾತಿ ಆಧಾರಿತ ವೃತ್ತಿಗಳನ್ನು ಮತ್ತು ಬಾಲ್ಯವಿವಾಹ ಪದ್ಧತಿಯನ್ನು ವಿರೋಧಿಸುವುದೇ ಸತ್ಯಶೋಧಕದ ಗುರಿಯಾಗಿತ್ತು. ಸ್ತ್ರೀ ಸ್ವಾತಂತ್ರ್ಯದ ವಿಷಯದಲ್ಲಿ

ಹೇಳಬೇಕಾದರೆ, ಇತಿಹಾಸದ ಕೆಲವೇ ಸಮಾಜ ಸುಧಾರಕರಲ್ಲಿ ಜ್ಯೋತಿಬಾರವರ ಹೆಸರು ಕೇಳಿಬರುತ್ತದೆ. ಏಕೆಂದರೆ ಇವರು ವಿಧವಾ ವಿವಾಹವನ್ನು ಪ್ರೋತ್ಸಾಹಿಸಿದರು. ಸತ್ಯವನ್ನು ಅರಸುವ ಧೈಯದ ಸತ್ಯಶೋಧಕ ಸಮಾಜವು ವ್ಯಕ್ತಿಯ ಸ್ವಾತಂತ್ರ್ಯದ ಮುಂದೆ ಯಾವುದೇ ಧಾರ್ಮಿಕ ಗುರು ಆಗಲಿ ಬೇರೆ ಗ್ರಂಥದ ಸಹಾಯವಿಲ್ಲದೇ ವ್ಯಕ್ತಿ ಸ್ವಾತಂತ್ರ್ಯಕ್ಕೆ ತಾರ್ಕಿಕ ಹಾಗೂ ಕಾನೂನಿನ ದೃಷ್ಟಿಯಲ್ಲಿ ಸಾಮಾಜಿಕ ನ್ಯಾಯ ಕೊಡಿಸುವುದಾಗಿತ್ತು ಮತ್ತು ಇದರ ಕಾರ್ಯ ಚಟುವಟಿಕೆಗಳನ್ನು ಪ್ರಚಾರಪಡಿಸಲು ಹಳ್ಳಿಗಳನ್ನು ಆಯ್ಕೆ ಮಾಡಲಾಯಿತು.

ಅವರ ವಿಚಾರಗಳು ಸೈದ್ಧಾಂತಿಕವಾಗಿರದಿದ್ದರೂ, ಜಾತಿಪದ್ಧತಿಯ ಪರಿಣಾಮದ ಪ್ರತಿಬಿಂಬವಾಗಿದ್ದವು. ಆಗಿನ ಸಾಮಾಜಿಕ ಸ್ಥಿತಿಗತಿಗಳನ್ನು ತೋರಿಸುತ್ತವೆ. 'ಸೇತಕರಾಂಚ ಅಸುಡ್' (ಊಳುವವನ ಚಾಟಿ) ಎಂಬ ಪುಸ್ತಕದಲ್ಲಿ ಮರಾಠರ ಆಡಳಿತದಲ್ಲಿ ಸಾಮಾಜಿಕ ಜೀವನ ಹೇಗಿರುತ್ತದೆಂಬುದನ್ನು ವಿವರಿಸುತ್ತಾರೆ. ಬ್ರಾಹ್ಮಣರು ಹೇಗೆ ಕೆಳಜಾತಿಯ ಜನರನ್ನು ಹಾಗೂ ಅನಕ್ಷರ ಜನರನ್ನು ಶೋಷಿಸುತ್ತಿದ್ದರು? ನಂತರ ಬ್ರಿಟೀಷರ ಆಡಳಿತದಲ್ಲಿ ಕೆಳಜಾತಿಯ ಜನರನ್ನು ಹಣಕಾಸಿನ ನೀತಿಯಿಂದ ಶೋಷಿಸಿದರು ಎಂಬುದನ್ನು ವಿವರಿಸಿದ್ದಾರೆ.

ಮಹಾತ್ಮಾ ಜ್ಯೋತಿಬಾ ಫುಲೆಯವರು ಸಾಮಾಜಿಕ ಸಮಾನತೆ, ಸಾಮಾಜಿಕ ನ್ಯಾಯದ ಜೊತೆಗೆ ಮಾನವನ ವ್ಯಕ್ತಿತ್ವ, ಘನತೆ, ಮಾನವನ ಹಕ್ಕುಗಳ ರಕ್ಷಣೆಯಾಗುವಂತೆ ಸಮಾಜ ಸ್ಥಾಪಿಸುವ ಗುರಿ ಹೊಂದಿದ್ದರು. ಇವರ ಕ್ರಾಂತಿಯು ವ್ಯಕ್ತಿಗತವಾಗಿ ಯಾರ ವಿರುದ್ಧವಾಗಿರದೇ ಇಡೀ ಮುಂದುವರೆದ ಸಮಾಜದ ವಿರುದ್ಧವಾಗಿತ್ತು. 28–11–1890 ರಲ್ಲಿ ಜ್ಯೋತಿಬಾ ಫುಲೆಯವರು ಪ್ರಕೃತಿಯಲ್ಲಿ ಲೀನವಾದರು.

1889 ರಲ್ಲಿ ತಮ್ಮ ಸಾರ್ವಜನಿಕ ಸತ್ಯಧರ್ಮ ಪುಸ್ತಕದಲ್ಲಿ ಅದ್ವಿತೀಯ ಅಖಂಡಗಳನ್ನು ರಚಿಸಿದರು. ಈ ಪುಸ್ತಕವನ್ನು 1891 ರಲ್ಲಿ ಜ್ಯೋತಿಬಾರವರ ಮರಣದ ನಂತರ ಪ್ರಕಟಿಸಲಾಯಿತು. ಅಖಂಡಗಳ ಮುಖಾಂತರ ಇವರು ಮಾನವ ಕಲ್ಯಾಣ, ಜಾತ್ಯತೀತ ಜೀವನಗಳಲ್ಲಿ ಪ್ರಾಯೋಗಿಕ ದೃಷ್ಟಿ, ಮುಂತಾದವುಗಳನ್ನು ಬೋಧಿಸಿದ್ದಾರೆ. ಜೀವನದಲ್ಲಿ ಆಶಾಭಾವನೆ, ಆಸ್ತಿಕತೆ ಇವರ ಅಖಂಡಗಳ ಮುಖ್ಯ ಲಕ್ಷಣಗಳು ಎಂದು ಜ್ಯೋತಿಬಾರವರು ಹೇಳುತ್ತಾರೆ. ಜ್ಯೋತಿಬಾ ಫುಲೆಯವರು ಸೈದ್ಧಾಂತಿಕ ಹಾಗೂ ಕ್ರಿಯಾಶೀಲ ವ್ಯಕ್ತಿಯಾಗಿದ್ದರು. ಮೇಲೆ ಹೇಳಿದ ಅನೇಕ ತಂತ್ರಗಳನ್ನು ಅಳವಡಿಸಿಕೊಂಡಿದ್ದರಿಂದ ಜ್ಯೋತಿಬಾರವರ ಚಳವಳಿ ಯಶಸ್ವಿಯಾಯಿತು. ಮಹಾರಾಷ್ಟ್ರದ ಬ್ರಾಹ್ಮಣೇತರ ಜಾತಿಯನ್ನು ಒಂದುಗೂಡಿಸಿದರು. ಇವತ್ತಿಗೂ ಜ್ಯೋತಿಬಾರವರು ಇಟ್ಟ ಹೆಸರಾದ ಬಹುಜನ ಎಂಬುದು ಹೆಸರುವಾಸಿಯಾಗಿದೆ. ಬಹುಜನ ಚಳವಳಿಯನ್ನು ಮಹಾರಾಷ್ಟ್ರಕ್ಕಷ್ಟೇ ಸೀಮಿತವಾಗದೇ ಮುಂಬೈ ಮತ್ತು ಮದ್ರಾಸ್ ಪ್ರಾಂತಗಳಿಗೂ ವಿಸ್ತರಿಸಿ ಸಾಮಾಜಿಕ ಚಳವಳಿಯನ್ನು ಪ್ರಾರಂಭಿಸಿದರು. ಬ್ರಾಹ್ಮಣೇತರರಲ್ಲಿ ಕೇವಲ ಒಂದೇ ಜಾತಿಗೆ ಸೀಮಿತವಾಗಿರದೇ ಎಲ್ಲ ಬ್ರಾಹ್ಮಣೇತರ ಜಾತಿಯವರಿಂದ ಬ್ರಾಹ್ಮಣ ಜಾತಿಯವರನ್ನಷ್ಟೇ ವಿರೋಧಿಸುವುದು ಜ್ಯೋತಿಬಾರವರ ಗುರಿಯಗಿತ್ತು. ಇವರ 63 ವರ್ಷಗಳ ಜೀವನದ ಹೋರಾಟದಲ್ಲಿ ಸಾಮಾಜಿಕ ಚಳವಳಿಯ ಹರಿಕಾರರೆಂದು ಇವರನ್ನು ಪರಿಗಣಿಸಲು ಅನೇಕ ಕಾರಣಗಳಿವೆ. ಸಮಾಜ ಸುಧಾರಣೆ, ಶಿಕ್ಷಣ, ಅದರಲ್ಲೂ ಮಹಿಳೆಯರಿಗೆ ಶಿಕ್ಷಣದ ಕ್ಷೇತ್ರದಲ್ಲಿ ಇವರ ಕೊಡುಗೆ ನಿಜವಾಗಿ ಉತ್ಕೃಷ್ಟ ಹಾಗೂ ಸ್ಮರಣೀಯವಾಗಿದೆ.

**ಉಪಸಂಹಾರ**

ಭಾರತೀಯ ಸಮಾಜವು ಆರೋಹಣದ ಪದ್ಧತಿಯ ಜಾತಿ ವ್ಯವಸ್ಥೆಯನ್ನು ಹೊಂದಿದೆ, ಸಮಾಜದ ಮೇಲೆ ಇದರಿಂದ ಗಂಭೀರ ಪರಿಣಾಮ ಬೀರಿದೆ. ಇತಿಹಾಸದಲ್ಲಿ

ಗೌತಮ ಬುದ್ಧನು ಜಾತಿ ಪದ್ಧತಿಯನ್ನು ವಿರೋಧಿಸಿ ಕ್ರಾಂತಿಮಾಡಿದರು, ಅದು ಸಾಮಾಜಿಕ ಕ್ರಾಂತಿ ಎಂದು ಗುರುತಿಸಲ್ಪಟ್ಟಿದೆ. ಬುದ್ಧನ ತತ್ವವು ಮನುಷ್ಯ ಜೀವನಕ್ಕೆ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವದೊಂದಿಗೆ ಏಕತೆಯನ್ನು ಕೊಟ್ಟಿದೆ, ಅದೇ ರೀತಿ ಬಸವಣ್ಣ “ಕುಲಕುಲವೆಂದು ಹೊಡೆದಾಡದಿರಿ, ಕುಲದ ನೆಲೆ ಏನಾದರೂ ಬಲ್ಲಿರಾ?” ಎಂದು ಜಾತಿ ವ್ಯವಸ್ಥೆಯು ಒಳಗೊಂಡಿದೆ ಅಂದರೆ ಹಿಂದೂ ಧರ್ಮವೆಂಬ ಗಾಜಿನ ಮನೆಯಲ್ಲಿ ದುಕೊಂಡು ಕುಲ-ಜಾತಿಯ ಕುರಿತು ಪ್ರಶ್ನೆಮಾಡಿದರು. ಅದಲ್ಲದೆ ವಸಾಹತು ಕಾಲೀನ ಸಂದರ್ಭದಲ್ಲಿ ಮಹಾತ್ಮಾ ಜ್ಯೋತಿಬಾ ಫುಲೆಯವರು ಮಂತ್ರಯುಗದ ವಿರುದ್ಧ ಮಾತನಾಡಿದರು. ಆಂಗ್ಲರ ಸಹಕಾರದಿಂದ ಮಹಿಳೆ ಮತ್ತು ಅಸ್ಪೃಶ್ಯರ ಪರವಾಗಿ ದುಡಿಯುತ್ತಾ ಶಿಕ್ಷಣ ಕೊಡಿಸುವುದರ ಮೂಲಕ ಅವರ ಬಾಳಿನಲ್ಲಿ ಬೆಳಕು ಮೂಡಿಸಿದರು. ಅಂಬೇಡ್ಕರ್ ಅವರು ಬ್ರಿಟಿಷ್ ವಸಾಹತುಶಾಹಿ ರಾಜಕೀಯ ಸರ್ವಾಧಿಕಾರದ ವಿರೋಧಿಯಾಗಿದ್ದರು. ವಿಶೇಷವಾಗಿ ನಮ್ಮ ದೇಶದಲ್ಲಿರುವ ಸಾಮಾಜಿಕ ಸರ್ವಾಧಿಕಾರವನ್ನು ವಿರೋಧಿಸಿದ್ದರು. ಅಷ್ಟೇ ಅಲ್ಲ ಸಾಮಾಜಿಕ ಸರ್ವಾಧಿಕಾರದಿಂದ ಜನರನ್ನು ವಿಮೋಚನೆಗೊಳಿಸುವುದು ಅವರಿಗೆ ಆದ್ಯತೆಯ ವಿಷಯವಾಗಿತ್ತು, ಹೀಗಾಗಿ ಪರಂಪರೆಯ ಮಾನವಪರ ಚಿಂತನೆಗಳನ್ನು ಅಂಬೇಡ್ಕರ್ ಅವರು ಸಂವಿಧಾನ ಬದ್ಧಗೊಳಿಸಿದರು. ಅಷ್ಟೇ ಅಲ್ಲ ಕಡ್ಡಾಯಗೊಳಿಸಿ ಅದನ್ನೂ ಭಾರತದ ಪ್ರತಿಯೊಬ್ಬ ಪ್ರಜೆಯ ಹಕ್ಕಾಗಿ ಪರಿವರ್ತಿಸಿದರು.

**ಪರಾಮರ್ಶನ ಗ್ರಂಥಗಳು:**


1. ಸಿದ್ಧಲಿಂಗಯ್ಯ, ವಚನ ಚಳುವಳಿ ಮತ್ತು ದಲಿತರು, ಪುಟ 65
2. ಬಸವನಾಳ ಎಸ್.ಎಸ್: ಬಸವೇಶ್ವರರ ವಚನಗಳು, ಪುಟ 12–13
3. ಪೋತೆ ಎಚ್.ಟಿ: ಅವೈದಿಕ ಚಿಂತನೆ, ಪುಟ 25
4. ಸಬರದ ಬಸವರಾಜ: ಬಸವೇಶ್ವರ ಮತ್ತು ಪುರಂದರದಾಸ, ಪುಟ 14
5. ಕೆ.ಕೆ. ಕವಲೇಕರ: ನಾನ್ ಬ್ರಾಹ್ಮಿಣ ಮೂಮೆಂಟ್ ಇನ್ ಸೌಥ್ ಇಂಡಿಯಾ, ಪುಟ 46
6. ಕೀರ್ ಧನಂಜಯ್: ಮಹಾತ್ಮ ಜ್ಯೋತಿರಾವ ಫುಲೆ: ಫಾದರ್ ಆಫ್ ಇಂಡಿಯನ್ ಸೋಶಿಯಲ್ ರೆವಲ್ಯೂಷನ್, ಪುಟ 18–20
7. ಎನ್.ಆರ್. ಶಿವರಾಂ: ಡಾ. ಅಂಬೇಡ್ಕರ್ ದರ್ಶನ, ಪುಟ 25–26
8. ಕೀರ್ ಧನಂಜಯ್: ಡಾ. ಅಂಬೇಡ್ಕರ್ ಲೈಫ್ ಆ್ಯಂಡ್ ಮಿಷನ್, ಪುಟ 45–48
9. ಮ.ನ. ಜವರಯ್ಯ: ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ, ಪುಟ 35–36



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.